ಹಂತಕರನ್ನು ಈ ಕೂಡಲೇ ಪತ್ತೆ ಮಾಡಿ ಸಮಗ್ರ ತನಿಖೆ ಮಾಡಿ ಎಂದು ಧಿಕ್ಕಾರ ಕೂಗುತ್ತಿದ್ದರು. ಇದ್ದಕ್ಕಿದ್ದಂತೆ ಬಲಾಢ್ಯ ಪೊಲೀಸ್ ಪಡೆ ಸುತ್ತುವರೆಯಿತು. ದೂರದಲ್ಲಿ ಆಯುಧ ಹಿಡಿದು ಕಾಯುತ್ತಿತ್ತು. ಆ ಬಸವಣ್ಣನ ಮನೆಯಲ್ಲಿ ಪಾತಕಿಗಳು ಅಡಗಿದ್ದಾರೆ, ಅವರು ದೊಂಬಿ ಎಬ್ಬಿಸಬಹುದು ಎಂದು ಬೇರೇನೂ ಲೆಕ್ಕ ಹಾಕುತ್ತಿದ್ದರು. ಹೊತ್ತು ಮೀರುತ್ತಿತ್ತು. ಸಂಸ್ಕಾರಕ್ಕೆ ಮುಂದಾದರು, ಸ್ವಾಮೀಜಿಗಳು ಮಾಧ್ಯಮದವರಿಗೆ ಪೋಸ್ ಕೊಡಲು ಪೈಪೋಟಿ ಮಾಡುತ್ತಿದ್ದರು. ಹಂತಕರ ಕಡೆಯವರು ಗುಪ್ತವಾಗಿ ತಮ್ಮ ಸಂಚುಗಳ ಜಾಡನ್ನೆಲ್ಲಾ ಅತ್ತಇತ್ತ ಎಲ್ಲೆಡೆ ಅಳಿಸುತ್ತಾ ನಿಶ್ಚಿಂತೆಯಿಂದಿದ್ದರು. ಎಲ್ಲರೂ ರುದ್ರಭೂಮಿಯತ್ತ ನಡೆದರು. ದಿವ್ಯ ಶಿವ ಮೌನ ಆವರಿಸಿತು. ಹೆಣ್ಣೂ ಅಲ್ಲದ ಗಂಡೂ ಅಲ್ಲದ ಶಿವನ ಎದೆಯ ಕದ ತೆರೆದುಕೊಂಡಿತು. ಜುಳುಜುಳು ಅಲೆಯ ಲಾಸ್ಯದಲ್ಲಿ ಏನೊ ತೇಲಿ ಬರುತ್ತಿತ್ತು. ಅರೇ ಅದೊಂದು ಬಾಗಿಲು; ಮಾಯದ ಬಾಗಿಲೇ ಸರಿ... ಎಲ್ಲಿಂದ ಇಳಿದು ಬಂತು ಎಂದು ನೋಡುತ್ತಿದ್ದಂತೆ ಮುಂದೆ ಸಾಗಿ ಹೋಯಿತು. ವರ್ಣಿಸಲು ಸಾಧ್ಯವಾಗದ ಬಾಗಿಲು... ಎಲ್ಲಿಗೆ ಹೋಗುತ್ತದೆ... ಶಿವನೇ... ಇದೆಂತಹ ಪಕ್ಷಿಗಳು... ನೀಲಿ ಬಿಳಿ ಚುಕ್ಕಿಯ ಜೊತೆ ಕಣ್ಣಿನ ಬಿಳಿ ಹಳದಿ ಬೊಟ್ಟಿನ ಹಕ್ಕಿ ಸಂಸಾರ! ಬಾಗಿಲ ಆಚೆಈಚೆ ತುದಿಗಳಲ್ಲಿ ತಾಯಿ ತಂದೆ ಹಕ್ಕಿಗಳು ಮರಿಗಳ ಜೋಪಾನ ಮಾಡುತ್ತಿವೆ. ಮೂರು ಮುದ್ದು ಮರಿಗಳು ಬಾಗಿಲ ಪಟ್ಟಿ ಮೇಲೆ ಜೋಪಾನ ಆಡುತ್ತಿವೆ. ಆ ಬಾಗಿಲೋ ತಾನು ಸಪ್ತ ಸಾಗರಗಳತ್ತ ಸಾಗುತ್ತಿರುವೆ ಎಂಬ ಸಡಗರದಲ್ಲಿವೆ. ಅಲ್ಲದು ಹೋಗಿ ಯಾವ ಬಾಗಿಲಾಗಿ ಯಾವ ಯಾವ ದಿಕ್ಕುಗಳನ್ನೆಲ್ಲ ತನ್ನೊಳಕ್ಕೆ ಕರೆದುಕೊಳ್ಳುವುದೊ... ಅಹಾ! ಬಸವಣ್ಣಾ; ಏನು ನಿನ್ನ ಮಹಿಮೆ ಎಂದು ಕಡಲ ದಂಡೆಯ ಹಕ್ಕಿಗಳು ಬಾಗಿಲ ಬರಮಾಡಿಕೊಳ್ಳುತ್ತಿದ್ದವು.



ಶಾಂತಸಾಗರ 'ಬಾಗಿಲೇ ಬಾ ಬಾಗಿಲೇ ಲೋಕದ ಬಾಗಿಲುಗಳೆಲ್ಲ ಇನ್ನಾದರೂ ಬೆಳಗಲು ಬಾ ಬಾ ಬಾಗಿಲೇ; ಕಡಲ ಅಲೆಅಲೆಯಲ್ಲಿ ತೇಲು ಬಾಗಿಲೇ; ದಿಗಂತಗಳ ಸಂಜೆ ಮುಂಜಾವುಗಳ ಸಿಂಗರಿಸು ಬಾಗಿಲೇ; ಕಾಲಾತೀತ ಲೋಕದ ಬಾಗಿಲುಗಳ ಬೆಳಗಿಸು ಬಾಗಿಲೇ' ಎಂದು ಕರೆಯುತ್ತಿತ್ತು. ಹೊತ್ತು ಇಳಿಯುತ್ತಿತ್ತು. ಕತ್ತಲು ಆವರಿಸಿತು. ಆ ಬಸವಣ್ಣನ ಕಾಲದ ಮನೆಯ ಹಿತ್ತಲಲ್ಲಿ ಆ ಕಾಲದ ಒಂದು ಬೃಹತ್ ಮರವಿತ್ತು. ಪೊಟರೆ ಕೋಟೆಗಳಿದ್ದ ರೆಂಬೆ ಕೊಂಬೆಗಳಲ್ಲಿ ಅವತ್ತಿನ ನೀಲಾಂಬಿಕೆಯು ಹಕ್ಕಿ ಕಾಳು ಹಾಕಿ ಸಾಕಿದ ಪಕ್ಷಿಗಳು ಮರಿಗೆ ಮರಿ ಜೀವ ಕೊಟ್ಟು ಕೊಟ್ಟು ಅವುಗಳ ಸಂತಾನ ಹೆಚ್ಚಿ ಅವು ಅಲ್ಲೇ ವಾಸವಿದ್ದವು. ಇದ್ದಕ್ಕಿದ್ದಂತೆ ಒಣ ಕೊಂಬೆಗಳು ಉಜ್ಜಾಡಿ ಭಗ್ಗನೆ ಬೆಂಕಿ ಹೊತ್ತಿಕೊಂಡು ಕ್ಷಣಮಾತ್ರದಲ್ಲಿ ಮರದ ಬೆಂಕಿ ಬಸವಣ್ಣನ ಕಾಲದ ಆ ಮನೆಗೂ ಹಬ್ಬಿ ಧಗಧಗನೆ ಆ ಮನೆಯೂ ಉರಿಯತೊಡಗಿತು.

ಪಾಳೂರು ಮಲಗಿತ್ತು. ಯಾರಿಗೂ ಗೊತ್ತೇ ಆಗಲಿಲ್ಲ. ಕಾಲ ಮುಗುಮ್ಮಾಗಿ ಮುಗಿಸಿಬಿಟ್ಟಿತ್ತು. ಹಕ್ಕಿಗಳು ಗೂಡಿನ ಮರೆಯಿಂದ ಮರಿಗಳ ರಕ್ಷಿಸಿ ಕೊಂಡು ದಿಟ್ಟಿಸುತ್ತಿದ್ದವು. 'ಉರಿಯಲಿ ಉರಿದು ಬೂದಿ ಆಗಬೇಕಾದುದೆಲ್ಲವೂ; ಬರಲಿ ಮಳೆ ನಾಳೆಯ ಚಿಗುರಿಗಾಗಿ' ಎಂದು ಯಾವುದೋ ಹಕ್ಕಿ ಸದ್ದು ಮಾಡುತ್ತಿತ್ತು. ಇನ್ನು ಇಲ್ಲಿರುವುದೋ... ಜಂಗಮದ ಬಾಗಿಲೊಳು ಕೈಮುಗಿದು ಮುಂದೆ ಹೊರಟು ಹೋಗುವುದೋ ಎಂದು ಹಕ್ಕಿಗಳು ಧ್ಯಾನಿಸುತ್ತಿದ್ದವು.

ದೂರದಿಂದ ಧಿಕ್ಕಾರ ಮೊಳಗುತ್ತಿತ್ತು. 'ಹತ್ಯೆಗೈದವರ ಬಂಧಿಸಿ. ಇನ್ನು ಮುಂದೆ ನಾವು ಸುಮ್ಮನೆ ಕೂರುವುದಿಲ್ಲ' ಎಂದು ಪ್ರತಿರೋಧದ ಮಹಾಯಾನಕ್ಕೆ ನಿಗೂಢವಾಗಿ ಎಲ್ಲೆಲ್ಲಿಂದಲೋ ಜನ ಒಟ್ಟಾಗಿ ಕಾಲು ಕಿತ್ತು ನಡೆದಿದ್ದರು. ಯುವ ಜನಾಂಗ ಇದೇನಿದು ಎಂದು ಬೆರಗಾಗಿ ಗಮನಿಸುತ್ತಿತ್ತು.

●